## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ

## ಕೆ ಆರ್ ನಗರ.

## ಸಿ.ಸಿ. ನಂ. 118/2026

ಪಿರ್ಯಾದಿ ಃ ಸರ್ಕಾರದ ಪರ ಕೆ ಆರ್ ನಗರ ಪೋಲೀಸ್ ಠಾಣೆ

ಃವಿರುದ್ಧ ಃ

ಆರೋಪಿ ಃ ತೀರ್ಥೇಶ ಬಿನ್ ಲೇಟ್ ಶಿವನಂಜಪ್ಪ
42 ವರ್ಷ
ವಾಸಃ ದಡದಹಳ್ಳಿ ಗ್ರಾಮ,
ಸಾಲೀಗ್ರಾಮ ತಾಲ್ಲೂಕು
ಮೈಸೂರು ಜಿಲ್ಲೆ.

## ದೋಷಾರೋಪಣೆ

ಶ್ರೀ ಚಂದನ್.ಎಸ್ ಬಿ.ಕಾಮ್.,ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿ ನಾಯಾಧೀಶರು, ಕೆ.ಆರ್.ನಗರ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಿಸುವುದೇನೆಂದರೆಃ

ದಿನಾಂಕಃ 16-12-2025 ರಂದು ಬೆಳಿಗ್ಗೆ 10.15 ಗಂಟೆ ಸಮಯದಲ್ಲಿ ಕೆ.ಆರ್.ನಗರ ಪೊಲೀಸ್ ಠಾಣಾ ಸರಹದ್ದು ಸನ್ಯಾಸಿಪುರ ಗ್ರಾಮದ ಬಳಿ ಇರುವ ಹಳೆಯಿ ಹ್ಯಾಂಡ್ ಪೋಸ್ಟ ಸರ್ಕಲ್ ಬಳಿ ಶ್ರೀ ಅರ್ಕೇಶ್ವರ ದೇವಸ್ಥಾನದ ಕಡೆಯ ರಸ್ತೆಯಲ್ಲಿ ಚಾಸಾ-14 ರವರು ವಾಹನ ಸಂಖ್ಯೆ ಕೆಎ-09-ಕ್ಯೂ-7818 ಹೀರೋ ಹೊಂಡಾ ಸಿಡಿ 100 ಬೈಕ್ ನ್ನು ರಸ್ತೆಯ ಎಡ ಬದಿಯಲ್ಲಿ ನಿಧಾನವಾಗಿ ಚಲಾಯಿಸಿಕೊಂಡು ಬೈಕ್ ನಹಿಂಬದಿಯ ಸೀಟ್ ನಲ್ಲಿ ಚಾಸಾ-2 ಕೇಶವೇಗೌಡ ರವರನ್ನು ಕೂರಿಸಿಕೊಂಡು ಅರ್ಕೇಶ್ವರ ಗ್ರಾಮದ ಕಡೆಯಿಂದ ಹ್ಯಾಂಡ್ ಪೋಸ್ಟ ಮಾರ್ಗವಾಗಿ ಕೆಲಸಕ್ಕೆ ಹೋಗುತ್ತಿರುವಾಗ ಆರೋಪಿಯಾದ ನೀವು ವಾಹನ ಸಂಖ್ಯೆ ಕೆಎ-13-ಇಟಿ-1280 ಎಕ್ಸ ಎಲ್ 100 ಬೈಕ್ ನಲ್ಲಿ ಕಗ್ಗೆರೆ ಗ್ರಾಮದ ಕಡೆಗೆ ವಾಹನವನ್ನು ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-1 ಮತ್ತು ಚಾಸಾ-2 ರವರಿಗೆ ಅಪಘಾತಪಡಿಸಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **281** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ವಾಹನ ಕೆಎ-13-ಇಟಿ-1280 ಎಕ್ಸ ಎಲ್ 100 ಬೈಕ್‌ನ್ನು ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಚಾಸಾ-1 ಮತ್ತು 2 ರವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ-1 ಮತ್ತು 2 ರವರು ಬೈಕ್ ಸಮೇತ ಕೆಳಗೆ ಬಿದ್ದು ಚಾಸಾ-1 ರವರ ಎಡಕಾಲಿನ ಮೂಳೆ ಮುರಿದಿದ್ದು ಮತ್ತು ಚಾಸಾ-2 ರವರ ಬಲ ಭುಜದ ಭಾಗಕ್ಕೆ ಏಟಾಗಿ ಮೂಳೆ ಮುರಿದು ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ **ಕಲಂ 125(ಬಿ)** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಪ್ರಃ 1) ಕನ್ನಡದಲ್ಲಿ ಓದಿ ಹೇಳಿದ ಮೇಲಿನ ದೋಷಾರೋಪಣೆ ಅರ್ಥವಾಯಿತೇ?
ಉಃ ಅರ್ಥವಾಯಿತು

ಪ್ರಃ 2) ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ಸಾಕ್ಷಿಗಳ ವಿಚಾರಣೆಯಾಗ ಬಯಸುವಿರಾ?
ಉಃ ಒಪ್ಪಿಕೊಳ್ಳುತ್ತೇನೆ

ಆರೋಪಿಯ ವಿರುದ್ದ ದೋಷಾರೋಪಣೆ ರಚಿಸಿ ನೇರವಾಗಿ ಓದಿ ತಿಳಿಸಿದ ನಂತರ ಆತನು ಕೊಟ್ಟ ಉತ್ತರವನ್ನೇ ಸರಿಯಾಗಿ ಪಡೆದುಕೊಳ್ಳಲಾಯಿತೆಂದು ದೃಢೀಕರಿಸಿದೆ.

ದಿಃ 23-02-2026

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು,
ಕೆ ಆರ್ ನಗರ.

**ಆರೋಪಿಯ ಸಹಿಃ**